

# ಇಳಕಲ್ ಸೀರೆ ಉಟ್ಕೊಂಡು...



ಹಳ್ಳಿ ಹೆಣ್ಣುಮಗಳಿಗೆ ಮಾತ್ರ ಸೀಮಿತ ಎಂಬಂತಿದ್ದ ಸಾಂಪ್ರದಾಯಿಕ ಇಳಕಲ್ ಸೀರೆಗಳು ಈಗ ಸಿನಿಮಾ, ಮಾಡೆಲಿಂಗ್, ಸೆಲೆಬ್ರಿಟಿಗಳಷ್ಟೇ ಅಲ್ಲ, ಆಧುನಿಕ ಮನೋಭಾವದ ಮಹಿಳೆಯರನ್ನೂ ಬಹುವಾಗಿ ಸೆಳೆಯುತ್ತಿದೆ. ಇಳಕಲ್ ಸೀರೆಯಲ್ಲಿ ರೇಷ್ಮೆ, ಕಾಟನ್ ಸಿಲ್ಕ್, ಕೈಮಗ್ಗ ಸೀರೆಗಳೂ ಬಂದಿದ್ದು, ಫ್ಯಾಷನ್‌ಪ್ರಿಯರ ಅಂದವನ್ನು ದುಪ್ಪಟ್ಟು ಮಾಡುತ್ತಿವೆ.

■ ಮಂಜುಶ್ರೀ ಎಂ. ಕಡಕೋಳ

'ಉಟ್ರ ಇಳಕಲ್ ಸೀರಿ ಉಡ್ಬೇಕು, ತೊಟ್ರ ಗುಳೇದಗುಡ್ಡ ಖಣ ತೊಡ್ಬೇಕು' ಅನ್ನುವುದು ಇಳಕಲ್ ಸೀರೆ ಮತ್ತು ಗುಳೇದಗುಡ್ಡದ ಖಣದ ಮಹತ್ವ ಸಾರುವ ಉತ್ತರ ಕರ್ನಾಟಕದ ಜನಪ್ರಿಯ ಮಾತು.

ಚಳಿ, ಮಳೆ, ಬೇಸಿಗೆ ಕಾಲ ಯಾವುದೇ ಇರಲಿ ಅದಕ್ಕೆ ತಕ್ಕಂತೆ ಹೊಂದುವಂಥ ಸೀರೆಯೆಂದರೆ ಅದು ಇಳಕಲ್ ಸೀರೆ. ತನ್ನ ವಿಶಿಷ್ಟ ಬಣ್ಣ, ವಿನ್ಯಾಸದ ಕಾರಣದಿಂದಾಗಿ ಥಟ್ಟನೆ ನೋಡುಗರ ಗಮನ ಸೆಳೆಯುವ ಈ ಸೀರೆ ಉತ್ತರ ಕರ್ನಾಟಕದ ಹೆಂಗಳೆಯರ ಹೆಮ್ಮೆಯ ಪ್ರತೀಕ. ನೈಸರ್ಗಿಕ ಬಣ್ಣ, ಹತ್ತಿಯಿಂದ ತಯಾರಾಗುವ ಇಳಕಲ್ ಸೀರೆ ಧರಿಸಿದವರ ಸೊಬಗನ್ನು ದುಪ್ಪಟ್ಟು ಮಾಡುವ, ನಾಲ್ಕು ಜನರ ನಡುವೆ ಎದ್ದು ಕಾಣುವಂಥ ವಿಶೇಷತೆ ಹೊಂದಿರುವಂಥದ್ದು. ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಇಳಕಲ್‌ನಲ್ಲಿ ತಯಾರಾಗುವ ಈ ಸೀರೆಗಳು ಇಂದು ಜಾಗತಿಕ ಮಟ್ಟದಲ್ಲಿ ಮನ್ನಣೆಗೆ ಪಾತ್ರವಾಗಿವೆ. ಆಧುನಿಕ ಕಾಲಕ್ಕೆ ತಕ್ಕಂತೆ ತನ್ನ ವಿನ್ಯಾಸ, ಬಣ್ಣದಲ್ಲೂ ಹೊಸತನವನ್ನು ಅಳವಡಿಸಿಕೊಂಡಿರುವ ಇಳಕಲ್ ಸೀರೆಗಳ ಸೌಂದರ್ಯಕ್ಕೆ ಮನಸೋಲದವರಿಲ್ಲ.

ಮೈತುಂಬಾ ಕಾಟನ್ ಮೆಟೀರಿಯಲ್ ಹೊಂದಿರುವ ಈ ಸೀರೆಯ ಸೆರಗು ಅಪ್ಪಟ